**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 15/2020** **ಅ.ಸಾ. 5**

**ಚಾ.ಸಾ.5**

| | | |
|---|---|---|
| ಸಾಕ್ಷಿದಾರರ ಹೆಸರು | - | ನಾರಾಯಣ ಪೂಜಾರಿ |
| ತಂದೆಯ ಹೆಸರು | - | ಸುಬ್ಬಯ್ಯ ಪೂಜಾರಿ |
| ವಯಸ್ಸು | - | 52 ವರ್ಷ |
| ಉದ್ಯೋಗ | - | ಇಲೆಕ್ಟ್ರೀಷಿಯನ್ |
| ವಿಳಾಸ | - | ಕಡೆಕಾರು ಗ್ರಾಮ, ಉಡುಪಿ ತಾಲೂಕು. |

ದಿನಾಂಕಃ 28-07-2023 ರಂದು ಸಾಕ್ಷಿಯನ್ನು ಕರೆಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

1. ಮೃತ ವಿನೋದ ನನ್ನ ಮೊದಲ ಹೆಂಡತಿ. ಮೃತ ಯೋಗೀಶ ಹಾಗೂ ಅಸಾ2 ನನ್ನ ಮೊದಲನೇ ಹೆಂಡತಿಯ ಮಕ್ಕಳು. ಅಸಾ3 ನನ್ನ ಮೊದಲನೇ ಹೆಂಡತಿಯ ಅಕ್ಕ. ಅಸಾ4 ಹಾಗೂ ಶ್ಯಾಮ ಎಂಬವರು ಅಸಾ3 ರವರ ಸಹೋದರರು. ನನ್ನ ಮೊದಲ ಹೆಂಡತಿ ವಿನೋದ ಮೃತಪಟ್ಟ ನಂತರ ನಾನು ಎರಡನೇ ಮದುವೆಯಾಗಿ ಕಡೆಕಾರಿನಲ್ಲಿ ವಾಸವಾಗಿದ್ದೇನೆ. ಅಸಾ2 ಮತ್ತು ಮೃತ ಯೋಗೀಶ ಅಸಾ4 ರವರ ಜೊತೆಗೆ ಲಕ್ಷ್ಮೀನಗರದ ಮೂರನೇ ಕ್ರಾಸ್ ನಲ್ಲಿದ್ದು ಅಲ್ಲಿ ವಾಸ ವಾಗಿದ್ದಾರೆ. ಅಲ್ಲಿಗೆ ನಾನು ಆಗಾಗ ಹೋಗಿ ಬರುತ್ತಿದ್ದೆ.

2. ಮೃತ ಯೋಗೀಶನು ಮಲ್ಪೆಯಲ್ಲಿ ಬೋಟ್‌ನಲ್ಲಿ ಮೀನುಗಾರಿಕೆ ಕೆಲಸ ಮಾಡುತ್ತಿದ್ದನು. ಮೂರು ವರ್ಷಗಳ ಹಿಂದೆ ನಾನು ಕಡೆಕಾರಿನಲ್ಲಿರುವಾಗ ಅಸಾ2 ರವರು ನನಗೆ ಕರೆ ಮಾಡಿ ನನ್ನ ಮಗ ಯೋಗೀಶನನ್ನು ನಮ್ಮ ಮನೆಯ ಬಳಿ ಹೊಡೆದು ಹಾಕಿದ್ದಾರೆ ಮತ್ತು ಆತನನ್ನು ಮಣಿಪಾಲದ ಆಸ್ಪತ್ರೆಗೆ ಸಾಗಿಸುತ್ತಿದ್ದೇವೆ ಎಂದು ತಿಳಿಸಿದ ಮೇರೆಗೆ ನಾನು ನೇರವಾಗಿ ಮಣಿಪಾಲ ಆಸ್ಪತ್ರೆಗೆ ಹೋದಾಗ ಯೋಗೀಶನನ್ನು ಆಸ್ಪತ್ರೆಗೆ ತರುವಾಗಲೇ ಆತನು ಮೃತ ಪಟ್ಟಿರುವುದಾಗಿ ತಿಳಿಯಿತು. ಮೃತ ಯೋಗೀಶನ ಶವವನ್ನು ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ಆತನ

ಎದೆ, ಹೊಟ್ಟೆ, ಬೆನ್ನು ಹಾಗೂ ಇತರೆ ಭಾಗಗಳಿಗೆ ತಿವಿದ ಗಾಯಗಳಾಗಿರುವುದನ್ನು ನೋಡಿರುತ್ತೇನೆ. ಮಾರನೆಯ ದಿನ ಬೆಳಿಗ್ಗೆ ಪೋಲಿಸರು ಶವ ತನಿಖೆ ಮಾಡಿರುತ್ತಾರೆ. ಪೋಲಿಸರು ಶವ ತನಿಖಾ ಮಹಜರನ್ನು ತಯಾರಿಸಿರುತ್ತಾರೆ. ಆ ಸಮಯ ಪೋಲಿಸರು ಪೋಟೋ ತೆಗೆದಿರುತ್ತಾರೆ. ಆ ಪೋಟೋಗಳನ್ನು ನೋಡುತ್ತಿದ್ದು ನಿಪಿ-21 ಮತ್ತು 22 ಎಂದು ಗುರುತಿಸಲಾಯಿತು. ಯೋಗೀಶನನ್ನು ಯಾರು, ಯಾವ ಹತ್ಯಾರಿನಿಂದ ಮತ್ತು ಯಾವ ಕಾರಣಕ್ಕಾಗಿ ಹಲ್ಲೆ ಮಾಡಿದ್ದಾರೆ ಎಂದು ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಹಾಗೂ ವೀಡಿಯೋ ಕಾನ್ಸರೆನ್ಸ್ ಮೂಲಕ ನೋಡುತ್ತಿರುವ 1 ಮತ್ತು 2 ನೇ ಆರೋಪಿತರನ್ನು ಈ ಹಿಂದೆ ನೋಡಿರುವುದಿಲ್ಲ. ಒಂದನೇ ಆರೋಪಿ ಹಾಗೂ ಮೃತ ಯೋಗಿಶ್ ಪೂಜಾರಿಯ ನಡುವೆ ಯಾವ ರೀತಿಯ ಸಂಬಂಧ ಇತ್ತು ಎಂದು ಗೊತ್ತಿಲ್ಲ.

3. ಈ ಪ್ರಕರಣದ ಯಾವುದೇ ಆರೋಪಿಗಳ ಪರಿಚಯ ಇರುವುದಿಲ್ಲ. ನ್ಯಾಯಾಲಯದ ಮುಂದಿರುವ 3 ರಿಂದ 6 ನೇ ಆರೋಪಿತರು ಹಾಗೂ ವೀಡಿಯೋ ಕಾನ್ಸರೆನ್ಸ್ ಮೂಲಕ ತೋರಿಸಿದ 1 ಮತ್ತು 2 ನೇ ಆರೋಪಿತರ ಪರಿಚಯ ಇಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಆರೋಪಿತರನ್ನು ಪೋಲಿಸರು ನನಗೆ ತೋರಿಸಿರುವುದಿಲ್ಲ. ನಾನು ಪೋಲಿಸರಿಗೆ ಹೇಳಿಕೆ ಮತ್ತು ಮರು ಹೇಳಿಕೆಯನ್ನು ನೀಡಿರುವುದಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**<u>ಪಾಟಿ ಸವಾಲುಃ ಸರಕಾರಿ ಅಭಿಯೋಜಕರಿಂದಃ</u>**

1. ನನ್ನ ಮಗ ಯೋಗೀಶ ಹಾಗೂ ಒಂದನೇ ಆರೋಪಿ ವಿನಯ್ ದೇವಾಡಿಗ ಸ್ನೇಹಿತರಾಗಿರುವ ವಿಚಾರ ತಿಳಿದಿದೆ ಎಂದರೆ ಸರಿಯಲ್ಲ. ಈ ಪ್ರಕರಣದ 2 ರಿಂದ 6 ನೇ ಆರೋಪಿತರು ನಮ್ಮ ಪರಿಸರದಲ್ಲಿ ತಿರುಗಾಡುತ್ತಿರುವ ಸಮಯ ನಾನು ಅವರನ್ನು ನೋಡಿ ಪರಿಚಯ ಇರುತ್ತದೆ ಎಂದರೆ ಸರಿಯಲ್ಲ. ಒಂದನೇ ಆರೋಪಿಯು ನಮ್ಮ ಮನೆಗೆ ಆಗಾಗ ಬಂದು ಹೋಗುತ್ತಿದ್ದುದನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ಲಾಕ್ ಡೌನ್ ಸಮಯದಲ್ಲಿ ಒಂದನೇ ಆರೋಪಿಯು ಶರಾಬು ಕುಡಿಯುವುದನ್ನು ನೋಡಿದ್ದನ್ನು ಮೃತನು ಎಲ್ಲರಿಗೂ ಹೇಳಿ ಪದೇ ಪದೇ ಅಪಹಾಸ್ಯ

ಮಾಡುತ್ತಿದ್ದುದನ್ನು ಮೃತನು ಒಂದನೇ ಆರೋಪಿಯಲ್ಲಿ ಪ್ರಶ್ನಿಸಿದಾಗ ಅವರಿಬ್ಬರ ನಡುವೆ ಮಾತಿನ ಚಕಮಕಿಯಾಗಿ ತದನಂತರ ಅವರಿಬ್ಬರು ದ್ವೇಶಿಗಳಾಗಿದ್ದರು ಎಂದರೆ ಸರಿಯಲ್ಲ.

2. ದಿಃ 06-07-2020 ರಂದು ಯೊೀಗೀಶನಿಗೆ ಹಲ್ಲೆಯಾಗಿದೆ ಎಂದು ಗೊತ್ತಾಗಿ ನಾನು ನೇರವಾಗಿ ಮಣಿಪಾಲ ಆಸ್ಪತ್ರೆಗೆ ಹೋಗಿ ವಿಚಾರ ತಿಳಿದಾಗ ಅದೇ ದಿನ ರಾತ್ರಿ 11-30 ಗಂಟೆಗೆ ಈ ಪ್ರಕರಣದ 1 ರಿಂದ 5 ನೇ ಆರೋಪಿತರು ಅಕ್ರಮ ಕೂಟ ಕಟ್ಟಿಕೊಂಡು ಮಾತುಕತೆಯ ನೆಪವೂಡ್ಡಿ ಯೊೀಗೀಶನನ್ನು ಮನೆಯಿಂದ ಹೊರಗೆ ಕರೆದು ಕಾಂಕ್ರೀಟ್ ರಸ್ತೆಯ ಮೇಲೆ ಹರಿತವಾದ ಆಯುಧಗಳಿಂದ ಯೋಗೀಶನ ಹೊಟ್ಟೆ ಹಾಗೂ ಬೆನ್ನಿನ ಭಾಗಕ್ಕೆ ತಿವಿದು ಕೊಲೆ ಮಾಡಿ ಕಾರು ನಂಃ ಕೆಎ-20-ಎನ್-6805 ರಲ್ಲಿ ಪರಾರಿಯಾಗಿರುವ ವಿಚಾರ ತಿಳಿಯಿತು ಎಂದರ ಸರಿಯಲ್ಲ. ಸದ್ರಿ ವಿಚಾರದ ಕುರಿತು ದಿಃ 07-07-2020 ರಂದು ಶವ ತನಿಖಾ ಕಾಲದಲ್ಲಿ ಪೋಲಿಸರಿಗೆ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ-23 ಎಂದು ಗುರುತಿಸಲಾಯಿತು.

3. ಅದೇ ದಿನ ಈ ಪ್ರಕರಣದಲ್ಲಿ 1 ರಿಂದ 5 ನೇ ಆರೋಪಿತಲ್ಲದೆ 6 ನೇ ಆರೋಪಿ ಗಿರೀಶ ಸಹಾ ಕೃತ್ಯದಲ್ಲಿ ಭಾಗಿಯಾಗಿರುತ್ತಾನೆಂದು ತಿಳಿದು ಅದೇ ದಿನ ಪೋಲಿಸರ ಮುಂದೆ ನಾನು ಈಗ ಓದಿ ಹೇಳಿದಂತೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಮರು ಹೇಳಿಕೆಯನ್ನು ನಿಪಿ-24 ಎಂದು ಗುರುತಿಸಲಾಯಿತು. ದಿಃ 08-07-2020 ರಂದು ಉಡುಪಿ ವೃತ್ತ ನಿರೀಕ್ಷಕರು ನನ್ನನ್ನು ಅವರ ಕಚೇರಿಗೆ ಕರೆಸಿ ದಸ್ತಗಿರಿಯಾಗಿದ್ದ 1 ರಿಂದ 4 ನೇ ಆರೋಪಿತರನ್ನು ತೋರಿಸಿದ್ದು ನಾನು ಅವರನ್ನು ತಕ್ಷೀರಿನಲ್ಲಿ ಭಾಗಿಯಾಗಿರುತ್ತಾರೆ ಎಂದು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ಸಮಯ ಆರೋಪಿತರು ಕೃತ್ಯಕ್ಕೆ ಬಳಸಿದ ವ್ಯಾಗನ್ ಆರ್ ಕಾರು ಕೆಎ-20-ಎನ್-6805 ಅನ್ನು ಸಹಾ ತೋರಿಸಿದ್ದು ಅದನ್ನು ಸಹಾ ನಾನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಅದೇ ದಿನ ಈಗ ನನಗೆ ಓದಿ ಹೇಳಿದಂತೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಮರು ಹೇಳಿಕೆಯನ್ನು ನಿಪಿ-25 ಎಂದು ಗುರುತಿಸಲಾಯಿತು.

4. ದಿಃ 12-07-2020 ರಂದು ಉಡುಪಿ ವೃತ್ತ ನಿರೀಕ್ಷಕರು ನನ್ನನ್ನು ಅವರ ಕಚೇರಿಗೆ ಕರೆಸಿ ದಸ್ತಗಿರಿಯಾಗಿದ್ದ ಈ ಪ್ರಕರಣದ 5 ನೇ ಆರೋಪಿಯನ್ನು ತೋರಿಸಿದ್ದು ನಾನು ಅವನನ್ನು ತಕ್ಷೀರಿನಲ್ಲಿ ಭಾಗಿಯಾಗಿರುತ್ತಾರೆ ಎಂದು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ಸಮಯ ಆತನು ಕೃತ್ಯಕ್ಕೆ ಬಳಸಿದ ಸ್ಕೂಟರ್ ನಂಃ ಕೆಎ-20-ಇಬಿ-5237 ಅನ್ನು ಸಹಾ ತೋರಿಸಿದ್ದು ಅದನ್ನು ಸಹಾ ನಾನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಅದೇ ದಿನ ಈಗ ನನಗೆ ಓದಿ ಹೇಳಿದಂತೆ ಮರು

ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಮರು ಹೇಳಿಕೆಯನ್ನು ನಿಪಿ-26 ಎಂದು ಗುರುತಿಸಲಾಯಿತು. ಈ ಪ್ರಕರಣದ ಒಂದನೇ ಆರೋಪಿಗೆ ಯೋಗೀಶನ ಮೇಲೆ ವೈಯಕ್ತಿಕ ದ್ವೇಷ ಇದ್ದ ಕಾರಣ ಆತನು 2 ರಿಂದ 6 ನೇ ಆರೋಪಿತರೊಂದಿಗೆ ಸೇರಿಕೊಂಡು ಯೋಗೀಶ್ ಪೂಜಾರಿಯನ್ನು ಕೊಲೆ ಮಾಡುವ ಸಂಚು ರೂಪಿಸಿ ಅದೇ ದಿನ ರಾತ್ರಿ 11-30 ಕ್ಕೆ ಮಾರಕಾಯುಧ ಗಳಿಂದ ಹಲ್ಲೆ ಮಾಡಿ ಯೋಗೀಶ್ ಪೂಜಾರಿಯನ್ನು ಕೊಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳೇ ನನ್ನ ಮಗನನ್ನು ಕೊಲೆ ಮಾಡಿರುವ ವಿಚಾರ ಗೊತ್ತಿದ್ದರೂ ಸಹಾ ಈಗ ಆರೋಪಿಗಳಿಗೆ ಹೆದರಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿತರ ಪರವಾಗಿ ಪಾಟೀ ಸವಾಲುಃ ಶ್ರೀ ಎಂ.ಎಸ್.ಎಸ್. ವಕೀಲರಿಂದ** -ಇಲ್ಲ-

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ದಿನೇಶ್ ಹೆಗ್ಡೆ)
ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.